# ಅಭಿವೃದ್ಧಿಗಾಗಿ ಬಾಲಿಕಾ ಸಂಘಗಳು

### ಬಾಲಿಕಾ ಸಂಘದ ಉದ್ದೇಶಗಗಳು.

- ಬಾಲಕಿಯರು ಗ್ರಾಮ ಮತ್ತು ಪಟ್ಟಣಗಳಲ್ಲಿ ಸಂಘಟಿತರಾಗುವುದು.
- ತಮ್ಮ ಗ್ರಾಮ/ಪಟ್ಟಣ ಮತ್ತು ಕುಟುಂಬದಲ್ಲಿ ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹಗಳಿಗೆ ಅವಕಾಶವಿಲ್ಲದಂತೆ ಮಾಡುವುದು.
- ಲಿಂಗತಾರತಮ್ಯತೆ ಮತ್ತು ಮನೆಯ ಒಳಗೆ-ಹೊರಗೆ ಇರುವ ಅಸಮಾನತೆಯನ್ನು ಹೋಗಲಾಡಿಸಲು ಜಾಗೃತರಾಗುವುದರೊಂದಿಗೆ ಕುಟುಂಬ ಮತ್ತು ಸಮಾಜವನ್ನು ಎಚ್ಚರಿಸುವುದು.
- ಸಾರ್ವತ್ರಿಕ ಶಿಕ್ಷಣ (10 ನೇ ತರಗತಿ)ದ ಬಗ್ಗೆ ಹೋರಾಡುವುದು.
- ಮಹಿಳೆಯರ ಹಲವಾರು ಕಾನೂನುಗಳು, ಮಹಿಳಾ ಮತ್ತು ಮಕ್ಕಳ ಸೌಲಭ್ಯಗಳ ಬಗ್ಗೆ ಅರಿತು, ಪ್ರಚಾರ ಮಾಡಿ ಅದನ್ನು ಪಡೆಯಲು ಮತ್ತು ಸೂಕ್ತ ಫಲಾನುಭವಿಗಳಿಗೆ ಲಭಿಸುವಂತೆ ಪ್ರಯತ್ನಿಸುವುದು.
- ಗ್ರಾಮೀಣ ಮಟ್ಟದಲ್ಲಿ ಎಲ್ಲಾ ಇಲಾಖೆ, ನಾಗರಿಕರ ಸಂಘ ಸಂಸ್ಥೆಗಳ ಜೊತೆ ಸಹಭಾಗಿತ್ವಕ್ಕಾಗಿ ಪ್ರಯತ್ನಿಸುವುದು.
- ಹಲವಾರು ಸಾಮಾಜಿಕ, ಧಾರ್ಮಿಕ , ಮೂಢನಂಬಿಕೆ, ಕಟ್ಟುಪಾಡುಗಳ ಬಗ್ಗೆ ಸ್ವಷ್ಟ ಜ್ಞಾನಾರ್ಜನೆ ಪಡೆದು ಉತ್ತಮ ಹಾದಿಯತ್ತ ಸಾಗುವುದು.

**ಪ್ರಕಟಣೆ : (ದೂರವಾಣಿ ಕೋಡ್– 08532)**
ಜಿಲ್ಲಾಡಳಿತ (229011), ಜಿಲ್ಲಾ ಪಂಚಾಯತ್,(228448)
ಪೊಲೀಸ್ ಇಲಾಖೆ (235100) ಕಾರ್ಮಿಕ ಇಲಾಖೆ (226368)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/
ಜಿಲ್ಲಾ ಮಕ್ಕಳ ಸಂರಕ್ಷಣಾ ಘಟಕ (280670)
ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (227581),
ಸಾರ್ವಜನಿಕ ಶಿಕ್ಷಣ ಇಲಾಖೆ (226162) ಹಾಗೂ
ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ(235874,9902182108)
ಮಕ್ಕಳ ಸಹಾಯವಾಣಿ/ಜನಚೇತನ (1098) 223149
ಯುನಿಸೆಫ್ "ಮಕ್ಕಳ ಸಂರಕ್ಷಣಾ" ಯೋಜನೆ,
ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು (230610)





## ಬಾಲಿಕಾ ಸಂಘ

### ಬಾಲಿಕಾ ಸಂಘ

ಗ್ರಾಮೀಣ ಮತ್ತು ಪಟ್ಟಣ ಪ್ರದೇಶದಲ್ಲಿರುವ 11 ರಿಂದ 18 ವರ್ಷದೊಳಗಿನ ಎಲ್ಲಾ ಹೆಣ್ಣು ಮಕ್ಕಳು, ತಮ್ಮ ಅಭಿವೃದ್ಧಿಗಾಗಿ, ತಾವುಗಳೇ ರಚಿಸಿ, ತಾವೇ ನಡೆಸಿಕೊಂಡು ಹೋಗುವ ಬಾಲಕಿಯರ ಸಣ್ಣ ಸಣ್ಣ ಗುಂಪುಗಳನ್ನು ಬಾಲಿಕಾ ಸಂಘ ಎಂದು ಕರೆಯುತ್ತಾರೆ.

### ಬಾಲಿಕಾ ಸಂಘದ ಗುರಿ .

ಬಾಲಕಿಯರು ಸಂಘಟಿತರಾಗಿ ಹಲವಾರು ಸಾಮಾಜಿಕ ಹಾಗೂ ಮಹಿಳಾ ವಿಚಾರಗಳನ್ನು ತಿಳಿದು ಚಿಕ್ಕ ಪ್ರಪಂಚದಿಂದ ಹೊರಬಂದು ವಿಶಾಲ ಪ್ರಪಂಚವನ್ನು ಅರಿತು ಬಾಲಕಾರ್ಮಿಕ ಪದ್ಧತಿ ಮತ್ತು ಬಾಲ್ಯವಿವಾಹವನ್ನು ತಡೆಗಟ್ಟಿ, ತಮ್ಮ ಹಕ್ಕುಗಳನ್ನು ಅರಿತು ಅದನ್ನು ಸಮಾಜದಲ್ಲಿ ಪ್ರಶ್ನಿಸುತ್ತಾ, ಕುಟುಂಬದಲ್ಲಿ ಬದಲಾವಣೆ ತಂದು, ತಮ್ಮ ಅಭಿವೃದ್ಧಿಯನ್ನು ಕಾಣುವುದರ ಮುಖಾಂತರ ಸಮಾಜದ ಅಭಿವೃದ್ಧಿಯನ್ನು ಸಾಧಿಸುವುದು" ಮಹಿಳಾ ಸಮಾನತೆ, ಸ್ವಾತಂತ್ರ್ಯ, ಆರ್ಥಿಕ ಸ್ವಾವಲಂಭನೆಯನ್ನು ಅನುಭವಿಸುತ್ತಾ ಮಹಿಳಾ ಸಬಲೀಕರಣದೊಂದಿಗೆ, ಮಹಿಳೆಯರು ಸ್ವಾಭಿಮಾನದ ಬದುಕನ್ನು ಸಾಧಿಸುವುದು.



1. ಬಾಲಿಕಾ ಸಂಘವನ್ನು ರಚಿಸುವುದು

- ಯಾವುದೇ ಗ್ರಾಮ/ ಹಳ್ಳಿ/ ಓಣಿ/ ಊರುಗಳಲ್ಲಿರುವ 11 ರಿಂದ 18 ವರ್ಷದೊಳಗಿನ ಎಲ್ಲ ಬಾಲಕಿಯರು ಒಟ್ಟು ಸೇರಿ ಗುಂಪು ರಚಿಸಿ ಸಂಘ ಮಾಡುವುದು.
- ಇದರಲ್ಲಿ ಸಾಮಾನ್ಯವಾಗಿ ಸಂಪೂರ್ಣ ಶಾಲೆಬಿಟ್ಟ, ಶಾಲೆಗೆ ದಾಖಲಾಗದ ದುಡಿಯುವ ಬಾಲಕಿಯರು ಹೆಚ್ಚಾಗಿ ಸದಸ್ಯರಾಗಿ ಇರುತ್ತಾರೆ.
- ಕಾಲೇಜು ಮತ್ತು ಶಾಲೆಗೆ ಹೋಗುವ ಬಾಲಕಿಯರು ಕೂಡ ಸದಸ್ಯರಾಗಿ ಇರಬಹುದು. ಆದರೆ ಪ್ರೋತ್ಸಾಹಕ ಸದಸ್ಯರಾಗಿರುತ್ತಾರೆ.
- ಬಾಲಿಕಾ ಸಂಘವು ಸ್ಥಳೀಯ ಅಂಗನವಾಡಿ, ಶಾಲೆ, ಮಹಿಳಾ ಸಂಘ, ಸಮುದಾಯ ಭವನ, ಪಂಚಾಯಿತಿ ಕಛೇರಿ, ಮಂದಿರಗಳಲ್ಲಿ ಸಭೆ ಸೇರಬಹುದು ಅಥವಾ ಅವರಿಗೆ ಸೂಕ್ತವಾದ ಯಾವುದೇ ಜಾಗದಲ್ಲಿ ಸೇರಬಹುದು.
- ಸಂಘದಲ್ಲಿ 10 ರಿಂದ 30 ಸದಸ್ಯರು ಇರಬಹುದು, ಬೇಕಾದಲ್ಲಿ 2, 3 ಗುಂಪುಗಳನ್ನು ಮಾಡಿ ತಿಂಗಳಗೆ 1 ಅಥವಾ2 ಸಭೆ ಮಾಡುವುದು.
- ಸಂಘದಲ್ಲಿ ಎಲ್ಲರೂ ಸಮಾನರು 4 ಜನ ಸದಸ್ಯರನ್ನು ನಿರ್ದೇಶಕರನ್ನಾಗಿ ಆಯ್ಕೆ ಮಾಡಿ, ಪ್ರತಿ ಸಭೆಯಲ್ಲಿ ಯಾವುದೇ ಸದಸ್ಯರು ಸಭೆಯ ಅಧ್ಯಕ್ಷತೆಯನ್ನು ನಿರ್ವಹಿಸಬಹುದು. 4 ಜನ ನಿರ್ದೇಶಕರು ಪ್ರತಿ 3 ತಿಂಗಳಿಗೊಮ್ಮೆ ಬದಲಾಗುತ್ತಾರೆ.
- ಸಭೆಯ ವರದಿ, ಸಭೆ ಸದಸ್ಯರ ಪಟ್ಟಿ ಮಾಡಲು ಸ್ಥಳೀಯ ಅಂಗನವಾಡಿ ಮೇಲ್ವಿಚಾರಕರು/ ಶಿಕ್ಷಕರು/ ಪ್ರೇರಕರು/ ಶಾಲಾ ಶಿಕ್ಷಕರ ಸಹಾಯ ಪಡೆಯುವುದು.

ಇಲ್ಲಿ ಸ್ವಲ್ಪ ಗಮನಿಸಿ.

| ವಿಷಯ | ಕರ್ನಾಟಕ | ರಾಯಚೂರು |
|---|---|---|
| ☞ ಹೆಣ್ಣು ಮಕ್ಕಳ ಬಾಲ್ಯವಿವಾಹ | 23% | 39% |
| ☞ ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣ | 68% | 50% |
| ☞ ಲಿಂಗ ಪ್ರಮಾಣ | 968 | 992 |
| ☞ ಲಿಂಗ ಪ್ರಮಾಣ (0–6 ವಯಸ್ಸು) | 943 | 949 |
| ☞ 15–19 ವಯಸ್ಸಿನ ಹೆರಿಗೆ | 20% | 30.6% |
| ☞ ಶಿಶು ಮರಣ | 43 (1000ಕ್ಕೆ) | 59 (1000ಕ್ಕೆ) |
| ☞ ವರದಕ್ಷಿಣೆ ಸಾವು (2011) | 267 | – |
| ☞ 18 ವರ್ಷದೊಳಿಗಿನ ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ (2009–11) | 9597 | – |
| ☞ ಮಹಿಳೆಯರ ಮೇಲಿನ ಎಲ್ಲಾ ದೌರ್ಜನ್ಯ (2011) | – | 376 |

ಬಾಲಿಕಾ ಸಂಘದ ಕಾರ್ಯಚಟುವಟಿಕೆಗಳು.

- ಬಾಲ್ಯವಿವಾಹ, ಚಿಕ್ಕ ವಯಸ್ಸಿನ, ಹದಿಹರೆಯದಂತಹ ಹಲವಾರು ಆರೋಗ್ಯ, ಶಿಕ್ಷಣ ವಿಚಾರಗಳ ಕುರಿತು ಚರ್ಚಿಸಿ ಪರಿಶೀಲಿಸಿ, ಸಂಪ್ರದಾಯ ಭಾವನೆಗಳನ್ನು ಅರಿತು ಸಮಾನ ಭಾವನೆಗಳನ್ನು ತಿಳಿದುಕೊಳ್ಳುವುದು.
- ತಮ್ಮ ಮನೆ, ಕುಟುಂಬ ಗ್ರಾಮದಲ್ಲಿ 14 ವರ್ಷದೊಳಗಿನ ಶಾಲೆಬಿಟ್ಟ ಮಕ್ಕಳನ್ನು, ಪೋಷಕರನ್ನು ಮನವೊಲಿಸಿ ಶಾಲೆಗೆ ದಾಖಲಿಸುವುದು. ತಾವು ಕೂಡ ಶಿಕ್ಷಣ ಮುಂದುವರಿಸುವುದು.
- ಬಾಲಕಾರ್ಮಿಕತೆ ಬಗ್ಗೆ ಮಾಲೀಕರಿಗೆ, ಪೋಷಕರಿಗೆ, ಸಮುದಾಯ, ಸಾರ್ವಜನಿಕರಿಗೆ ವಿವಿಧ ರೀತಿಯಲ್ಲಿ ಜಾಗೃತಿ ಮೂಡಿಸುವುದು. ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡುವುದು.
- 18 ವರ್ಷತನಕ ಮದುವೆಯಿಂದ ದೂರವಿದ್ದು, 18 ವರ್ಷ ಪೂರ್ಣವಾದ ಮೇಲೆ ಮದುವೆ ಎಂಬ ಮಾನಸಿಕ ಬದ್ಧತೆಯೊಂದಿಗೆ ಗ್ರಾಮದಲ್ಲಿ 18 ವರ್ಷದೊಳಗಿನ ಯಾವುದೇ ಬಾಲಕಿಗೆ ಮಾದುವೆಯಾಗದಂತೆ ನೋಡುವುದು.
- ಗ್ರಾಮದಲ್ಲಿ ಬಾಲ್ಯವಿವಾಹದ ಬಗ್ಗೆ ಪ್ರಚಾರ ಮಾಡಿ ತಮ್ಮ ವ್ಯಾಪ್ತಿಯಲ್ಲಿ 18 ವರ್ಷದೊಗಳಗಿನ ಹೆಣ್ಣು ಮಕ್ಕಳಿಗೆ 21 ವರ್ಷದೊಳಗಿನ ಗಂಡು ಮಕ್ಕಳಿಗೆ ಮದುವೆಯಾಗದಂತೆ ನೋಡುವುದು, ಕೈಮೀರಿದಲ್ಲಿ ಸಂಬಂಧಿಸಿದ ಇಲಾಖೆಗಳಿಗೆ ಮಾಹಿತಿ ನೀಡುವುದು.
- ಮಕ್ಕಳು ಮತ್ತು ಮಹಿಳೆಯರ ಸಾಗಾಣಿಕೆ ಮತ್ತು ಮಾರಾಟವನ್ನು ತಡೆಗಟ್ಟಿ ಮಹಿಳಾ ದೌರ್ಜನ್ಯ, ಶೋಷಣೆ, ದಬ್ಬಾಳಿಕೆ ವಿರುದ್ಧ ಧ್ವನಿ ಎತ್ತುವುದು, ಪ್ರಶ್ನಿಸುವುದು.
- ಸ್ಥಳೀಯ ಮಟ್ಟದ ವಿವಿಧ ಇಲಾಖೆಗಳಲ್ಲಿನ ವೃತಿ ಕೌಶಲ್ಯ ತರಬೇತಿಗಳನ್ನು ಪಡೆಯುವುದು ಹಾಗೂ ಎಲ್ಲಾ ಬಾಲಕಿಯರು ಪಡೆಯುವಂತೆ ಪ್ರೋತ್ಸಾಹಿಸುವುದು. ಆ ಮೂಲಕ ಆರ್ಥಿಕ ಸ್ವಾವಲಂಭನೆ ಮತ್ತು ಸ್ವಾಭಿಮಾನವನ್ನು ಬೆಳೆಸಿಕೊಳ್ಳುವುದು.
- ಆರೋಗ್ಯ, ಚುಚ್ಚು ಮದ್ದು, HIV/AIDS, ಗರ್ಭಿಣಿತನ, ತಾಯಿತನ, ಬಾಣಂತನ, ವಿವಿಧ ರೋಗಗಳು, ಪೌಷ್ಠಿಕತೆ, ಹಲವಾರು ಆರೋಗ್ಯ ವಿಚಾರಗಳ ಬಗ್ಗೆ ಗ್ರಾಮೀಣ ಮತ್ತು ಪಟ್ಟಣ ಪ್ರದೇಶದಲ್ಲಿರುವ ಬಾಲಕಿಯರು ಜಾಗೃತರಾಗುವುದು.

ಬಾಲಿಕಾ ಸಂಘದ ಫಲಿತಾಂಶಗಳು.

- 100% "ಬಾಲ್ಯವಿವಾಹ"ದ ನಿರ್ಮೂಲನೆ.
- 100% ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ.
- ವೃತ್ತಿ ಕೌಶಲ್ಯ ಹೊಂದಿ ಆರ್ಥಿಕ ಸಮಾನತೆ, ಸ್ವಾತಂತ್ರ್ಯ ಮತ್ತು ಸಾಮಾಜಿಕ ಸ್ವಾವಲಂಬನೆ ಪಡೆಯುವುದು.
- ಲಿಂಗ ಸಮಾನತೆ ಮತ್ತು ಮಹಿಳಾ ಸ್ವಾತಂತ್ರ್ಯವನ್ನು ಗ್ರಾಮಗಳಲ್ಲಿ ಕಾಣವುದು
- ಬಾಲಕಿಯರ ಜಾಗೃತಿಯಿಂದ ಶಿಕ್ಷಣ, ಆರೋಗ್ಯದಲ್ಲಿ ಬದಲಾವಣೆ.
- ಪ್ರತಿ ಬಾಲಕಿಯಿಂದ 2 ಕುಟುಂಬದಲ್ಲಿ ಬದಲಾವಣೆ ಮತ್ತು ಜಾಗೃತ ಕುಟುಂಬಗಳನ್ನು ಕಾಣಬಹುದು.
- ಸಮಾಜದಲ್ಲಿ ಅನ್ಯಾಯದ ವಿರುದ್ಧ ಪ್ರಶ್ನಿಸುವ ಪ್ರತಿಭಾವಂತ ಮಹಿಳೆಯರು.
- ಸಮಾಜದಲ್ಲಿ ಮಹಿಳಾ ಸಬಲೀಕರಣವನ್ನು ಸಾಧಿಸುವುದು.



ರಾಯಚೂರು ತಾಲೂಕಿನಲ್ಲಿ "ಬಾಲಿಕಾ ಸಂಘಗಳ" ಸಾಧನೆಯ ಹೆಜ್ಜೆಗಳು;









- 112 ಕ್ಕೂ ಹೆಚ್ಚು ಬಾಲಿಕಾ ಸಂಘಗಳ ರಚನೆ.
- 3600 ಕ್ಕೂ ಹೆಚ್ಚು ಬಾಲಕಿಯರು ಸಂಘಟಿತರಾಗಿದ್ದಾರೆ.
- 3600ಕ್ಕೂ ಹೆಚ್ಚು ಕುಟುಂಬಗಳು ಬಾಲಕಾರ್ಮಿಕ ಮತ್ತು ಬಾಲ್ಯವಿವಾಹಂತಹ ಮುಕ್ತ ಕುಟುಂಬಗಳಾಗಿವೆ. ಇವರ ಮನೆಗಳಲ್ಲಿ ಬಾಲ್ಯವಿವಾಹ ಮತ್ತು ಬಾಲಕಾರ್ಮಿಕತೆ ಸಂಪೂರ್ಣ ನಿಷೇಧ.
- 3600 ಕ್ಕೂ ಹೆಚ್ಚು ಬಾಲಕಿಯರು "ಬಾಲ್ಯವಿವಾಹ" ವಿರೋಧಿಸಿ 18 ವರ್ಷ ತನಕ ಮದುವೆಯನ್ನು ನಿರಾಕರಿಸಿದ್ದಾರೆ.
- 27 ಕ್ಕೂ ಹೆಚ್ಚು ಬಾಲ್ಯವಿವಾಹಗಳನ್ನು ಹಳ್ಳಿಗಳಲ್ಲಿ ನಿಲ್ಲಿಸಿರುತ್ತಾರೆ.
- 350 ಕ್ಕೂ ಹೆಚ್ಚು ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ದಾಖಲಿಸಿದ್ದಾರೆ.
- 1051 ಬಾಲಕಿಯರು ವೃತ್ತಿ ಕೌಶಲ್ಯ ತರಬೇತಿ ಪಡೆದಿದ್ದಾರೆ. ( ಕಂಪ್ಯೂಟರ್, ವಾಹನ ಚಾಲನೆ, ಹೊಲಿಗೆ ತರಬೇತಿ).
- 140 ಬಾಲಕಿಯರು ಹೊಲಿಗೆ ತರಬೇತಿ ಪಡೆದ ನಂತರ ಹೊಲಿಗೆ ಯಂತ್ರ ಖರೀದಿಸಿ ಸ್ವಂತ ಉದ್ಯೋಗ ನಡೆಸುತ್ತಾ ಮಾಸಿಕ ರೂ. 4000/– ಕಿಂತಲೂ ಹೆಚ್ಚು ಸಂಪಾದನೆಯಲ್ಲಿ ತೊಡಗಿದ್ದಾರೆ, ಆರ್ಥಿಕ ಸ್ವಾವಲಂಭನೆಯ ದಾರಿಯಲ್ಲಿದ್ದಾರೆ.
- ವಿವಿಧ ಇಲಾಖೆ, ಕಛೇರಿ, ಶಾಲೆ, ಗ್ರಾಮ ಪಂಚಾಯಿತಿ, ಪೊಲೀಸ್ ಠಾಣೆಗಳಿಗೆ ಭೇಟಿ ನೀಡಿ ಸಂವಾದ ನಡೆಸಿ ಮಾಹಿತಿ ಪಡೆದು ಜಾಗೃತರಾಗಿದ್ದಾರೆ.
- ಸೂಕ್ತ ಸಮಯದಲ್ಲಿ ಮಕ್ಕಳ ಹಕ್ಕುಗಳ ಉಲ್ಲಂಘನೆ ವಿರುದ್ಧ ಧ್ವನಿ ಎತ್ತಿ ದೂರು ಮತ್ತು ಮಾಹಿತಿ ನೀಡಿ ನ್ಯಾಯ ಒದಗಿಸುವ ಪ್ರಕ್ರಿಯಲ್ಲಿದ್ದಾರೆ.
- 270 ಬಾಲ್ಯವಿವಾಹಗಳನ್ನು ನಿಲ್ಲಿಸಲಾಗಿದೆ. 7 ಪ್ರಕರಣ ದಾಖಲಿಸಿ 12 ಜನ ಜೈಲಿಗೆ ಹೋಗಿರುತ್ತಾರೆ.